(ಗೊಂದಲ)

(ಅಧ್ಯಕ್ಷರು ರೆಕಾರ್ಡ್ ಮಾಡಿಕೊಳ್ಳಬೇಡಿ ಎಂದು ತಿಳಿಸಿದರು)

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಪ್ರಧಾನಮಂತ್ರಿ ಅವರನ್ನು ಮನೆಯಲ್ಲಿ ಪೂಜೆ ಮಾಡಲಿ. ಇಲ್ಲಿ ಅವರ ಹೆಸರಿನ ಮೇಲೆ ಪ್ರಸ್ತಾಪ ಮಾಡಿದರೆ ಅದು ಅನ್‌ಕಾನ್‌ಸ್ಟಿಟ್ಯೂಷನಲ್ ಆಗುತ್ತದೆ.

ಎಸ್. ಶಿವಣ್ಣ (ತುಮಕೂರು)

ಬಿ. ಶಿವರಾಮು (ಗಂಡಸಿ)

ಶ್ರೀರಂಗದೇವರಾಯಲು (ಗಂಗಾವತಿ)

ಸಿ. ವೆಂಕಟೇಶಪ್ಪ (ಬೇತಮಂಗಲ)

ಅಧ್ಯಕ್ಷರ ಚುನಾವಣೆ

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ. ಈ ಸದನದ ಮಾನ್ಯ ಸದಸ್ಯರಾದ ಶ್ರೀ ಎಂ. ವಿ.ವೆಂಕಟಪ್ಪ ಅವರನ್ನು ಹನ್ನೊಂದನೆಯ ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಎಸ್.ಎಂ. ಕೃಷ್ಣರವರು ಸೂಚಿಸಿರುವ ಈ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಹಂಗಾಮಿ ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಎಸ್.ಎಂ. ಕೃಷ್ಣರವರು ಸೂಚಿಸಿರುವ ಹಾಗೂ ಮಾನ್ಯ ಗೃಹಮಂತ್ರಿಯವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಅನುಮೋದಿಸಿರುವ ಪ್ರಸ್ತಾವ ಈ ರೀತಿ ಇದೆ.

"ಶ್ರೀ ಎಂ. ವಿ. ವೆಂಕಟಪ್ಪನವರನ್ನು ಹನ್ನೊಂದನೆಯ ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸುವುದು".

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಶ್ರೀ ಎಂ.ವಿ. ವೆಂಕಟಪ್ಪ ಅವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

(ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)